



ಕಾಡಾನೆಗಳ ಬಗ್ಗೆ ಮಮತೆ

ಸಿಂಥಿಯಾ ಮೊಸ್ ಈ ವೈಜ್ಞಾನಿಕಳ ಸಾಹಸ ಕತೆ



ಕಾಡಾನೆಗಳ ಬಗ್ಗೆ ಮಮತೆ

ಸಿಂಥಿಯಾ ಮೊಸ್ ಈ ವೈಜ್ಞಾನಿಕಳ ಸಾಹಸ ಕತೆ

ಲೇಃ ಟೋನಿ ಬುಝ್ಝಿಯೋ

ಕನ್ನಡಕ್ಕೆಃ ಪ್ರಭಾಕರ ನಾನಾವಟಿ

ಬೆನ್ನು ಕೂಡ ಕಾಣದಷ್ಟು ಎತ್ತರದ ಕುದುರೆಯನ್ನು ನಿಮ್ಮ ಕಣ್ಮುಂದೆ ತನ್ನಿ. ಈಗ ಏಳು ವರುಷದ ಪುಟ್ಟ ಹುಡುಗಿ ಈ ಗಟ್ಟಿ ನೆಲದಿಂದ ಆಳೆತ್ತರದ ಮೇಲಿರುವ ಕುದುರೆಯ ಬೆನ್ನಿನ ಮೇಲೆ ಕುಳಿತಿದ್ದಾಳೆಂದು ಕಲ್ಪಿಸಿಕೊಳ್ಳಿ. ಆ ಚಿಕ್ಕ ಹುಡುಗಿಯೇ ಸಿಂಥಿಯಾ ಮೊಸ್.


ಅವಳಿಗೆ ಇಂತಹ ದೊಡ್ಡ ಗಾತ್ರದ ಅಂಜಿಕೆಯೇ ಇಲ್ಲ.



ಸಿಂಥಿಯಾಳಿಗೆ ಹನ್ನೆರಡು ತುಂಬಿದಾಗ ಕೆಲ್ಲಿ ಎಂಬ ಕುದುರೆಯ ಮೇಲೆ ಕುಳಿತು ನ್ಯೂಯಾರ್ಕದ ಹತ್ತಿರವಿದ್ದ ಓಸ್ಸಿಂಗದಲ್ಲಿಯ ತನ್ನ ಮನೆಯಿಂದ ನಾಗಾಲೋಟದಲ್ಲಿ ಕುದುರೆಯನ್ನು ಓಡಿಸುತ್ತಿದ್ದಳು. ಕೆಲ್ಲಿ ಮತ್ತು ಅವಳಿಗೆ ಸಮೀಪದ ಬೆಟ್ಟದಲ್ಲಿಯ ಜಿಗರೆ ಮತ್ತು ನರಿಗಳನ್ನು ಕಂಡು ಸಂತಸವಾಗುತ್ತಿತ್ತು. ಅವಳಿಗೆ ಈ ನಿಸರ್ಗ ಕೈಮಾಡಿ ಕರೆಯುತ್ತಿದ್ದಂತೆ ಅನ್ನಿಸುತ್ತಿತ್ತು.




ಹದಿನಾರು ವರುಷದವಳಿದ್ದಾಗ ಸಿಂಥಿಯಾ ಮನೆಯಿಂದ ದೂರದ ಸಾಹಸಕ್ಕಾಗಿ ಹೊರಬಿದ್ದಳು. ಆರು ನೂರು ಕಿಲೋಮೀಟರ್ಸ ದೂರವಿರುವ ವ್ಹರ್ಜಿನಿಯಾದ ಶಾಲೆಯಲ್ಲಿ ಅವಳು ಪ್ರವೇಶ ತೆಗೆದುಕೊಂಡಳು. ಅಲ್ಲಿ ಎಲ್ಲರಿಗೂ ಕುದುರೆಗಳ ಮೇಲಿನ ಅಲೆದಾಟದ ಹುಚ್ಚು. ಅವಳು ಕೂಡ ಈ ಹುಚ್ಚಿನಲ್ಲಿ ಪಾಲ್ಗೊಂಡಳು



ಆ ನಂತರ ಅವಳು ಪದವಿ ಗಳಿಸಿ ಕಾಲೇಜಿನಿಂದ ಹೊರಬಿದ್ದಾಗ ಆಕೆಗೆ ತಾನು ಬಹು ಸಾಹಸದ ಕಾರ್ಯ ಮಾಡಿ ವೈಜ್ಞಾನಿಕಳಾಗುವಳೆಂದು ಅವಳಿಗೆ ಹೊಳೆದಿರಲಿಲ್ಲ.




ಸಿಂಥಿಯಾ ಸುದ್ದಿಗಾರಳೆಂದು ಒಂದೆಡೆ ಕೆಲಸ ಮಾಡುತ್ತಿದ್ದಾಗ ಪೆನ್ನಿ ಎಂಬ ಅವಳ ಗೆಳತಿ ದೊಡ್ಡ ಖಂಡವಾದ ಆಫ್ರಿಕೆಯಿಂದ ಪತ್ರ ಬರೆಯುತ್ತಿದ್ದಳು. ಪೆನ್ನಿಯ ಈ ಪತ್ರಗಳನ್ನು ಓದುತ್ತಿರುವಾಗ ಸಿಂಥಿಯಾಗೂ ಕೂಡ ಆಫ್ರಿಕೆಯನ್ನು ನೋಡಲೇಬೇಕೆಂದು ಅನ್ನಿಸತೊಡಗಿತು.
ಈ ಖಂಡಕ್ಕೆ ಒಬ್ಬರೇ ಭೇಟ್ಟಿಕೊಡಲು ಸಾಕಷ್ಟು ಜನರು ಅಂಜುತ್ತಿದ್ದರು.
ಆದರೆ ಸಿಂಥಿಯಾಗೆ ಈ ಖಂಡಕ್ಕೆ ಭೇಟ್ಟಿ ಕೊಡಲು ಯಾವ ಅಭ್ಯಂತರವಿರಲಿಲ್ಲ.



ಆಫ್ರಿಕಾದಲ್ಲಿ ಕಾಲಿಟ್ಟ ದಿನದಿಂದಲೇ ಸಿಂಥಿಯಾ ಆಫ್ರಿಕೆಯ ಪ್ರೇಮದಲ್ಲಿ ಬಿದ್ದಳು. ಬಂದು ಮುಟ್ಟಿದ ವಾರದಲ್ಲಿಯೇ “ನಾನು ನನ್ನ ಮನೆಗೆ ಬಂದಂತೆ!” ಅವಳಿಗೆ ಅನ್ನಿಸಿತಂತೆ. ಸಿಂಥಿಯಾ ಪೂರ್ವ ಆಫ್ರಿಕೆಯ ಹುಲ್ಲುಗಾಡುಗಳಲ್ಲಿಯೇ ತನ್ನ ಆಯುಸ್ಸು ಕಳೆಯಬೇಕೆಂದು ನಿರ್ಧರಿಸಿದಳು.

ಆದರೆ ಅವಳಿಗೆ ಏನಾದರೂ ಉದ್ಯೋಗ ಬೇಕಿತ್ತು. ಸುದೈವದಿಂದಾಗಿ ಒಂದು ದಿನ ಆಫ್ರಿಕೆಯಲ್ಲಿಯ ಕಾಡಾನೆಗಳ ಅಭ್ಯಾಸ ಮಾಡುತ್ತಿದ್ದ ಓರ್ವ ಪ್ರಾಣಿಶಾಸ್ತ್ರಜ್ಞ ಅವಳಿಗೆ ಭೆಟ್ಟಿಯಾದರು. ಅವರು ಅವಳಿಗೆ ಅಲ್ಲಿಯ ಅಡವಿಯಲ್ಲಿ ವಾಸಿಸುವ ಕಾಡಾನೆಗಳಂತಹ ದೊಡ್ಡ ದೊಡ್ಡ ಪ್ರಾಣಿಗಳ ಛಾಯಾಚಿತ್ರಗಳನ್ನು ತೆಗೆಯುವ ಕೆಲಸ ಕೊಟ್ಟರು.

ನಿಮ್ಮ ಹತ್ತಿರವಿದ್ದ ಕ್ಯಾಮೆರಾದಿಂದ ಅಡವಿತುಂಬ ಗುಂಪು ಗುಂಪಾಗಿ ಅಲೆಯುತ್ತಿರುವ ಕಂದು ಬಣ್ಣದ ಕಣ್ಣುಗಳ, ಸುಕ್ಕುಗಟ್ಟಿದಂತೆ ಕಾಣುವ ಮುಖದ, ಗಟ್ಟಿ ಎಂದೆನ್ನಿಸುತ್ತಿದ್ದರೂ ಬಹು ಮೆದುವಾದ ಸೊಂಡಿಲಿನ, ನಯವಿರುವ ಚರ್ಮದ ಒಂದೇ ಸಮ ಕಾಣುವ ಕಾಡಾನೆಗಳ ಛಾಯಾಚಿತ್ರಗಳನ್ನು ಹೇಗೆ ತೆಗೆಯಬಹುದು?ಎಂಬುದರ ಕಲ್ಪನೆ ಮಾಡಿ ನೋಡಿ. ಆದರೆ ಸಿಂಥಿಯಾ ಅಂಥವುಗಳ ಬೇರೆ ಬೇರೆ ಹಂತಗಳಲ್ಲಿಯ ಸ್ನಾಯುಗಳ, ಹೊರಬದಿಗೆ ಕಾಣುವ ಕಿವಿಯಲ್ಲಿಯ ರಂಧ್ರಗಳ ಅಭ್ಯಾಸವನ್ನು ಮಾಡತೊಡಗಿದಳು. ಆನೆಗಳ ಬೆಳ್ಳಗೆ ಮಿನುಗುವ, ಡೊಂಕುಡೊಂಕಾದ, ಕೆಲಸಲ ತುಂಡಾದ ಇಲ್ಲವೆ ಬಿರುಕು ಬಿದ್ದಿರುವ ಹಸ್ತಿದಂತಗಳ ಬಗ್ಗೆ ಕಲಿತು ಅವುಗಳನ್ನು ಒಂದೊಂದಾಗಿ ಗುರುತಿಸತೊಡಗಿದಳು.



ಸಿಂಥಿಯಾ ಕಾಡಾನೆಗಳನ್ನು ಪ್ರೀತಿಸಿದಂತೆ ಅವುಗಳು ವಾಸ ಮಾಡುತ್ತಿರುವ ಅಡವಿಯಲ್ಲಿಯ ಧೂಳು ತುಂಬಿದ ಮನೆಗಳನ್ನು ಕೂಡ ಪ್ರೀತಿಸತೊಡಗಿದಳು.
"ಅವುಗಳೆಲ್ಲ ಆಕರ್ಷಕವಾದ, ವೈಶಿಷ್ಟ್ಯಪೂರ್ಣ, ಮೃದು ಪ್ರಾಣಿಗಳು. ಆದ್ದರಿಂದಲೇ ನಾನು ಅವುಗಳನ್ನು ಪ್ರೀತಿಸುತ್ತೇನೆ. ನನ್ನ ಇಡೀ ಜೀವನವನ್ನೇ ಅವುಗಳನ್ನು ಅಭ್ಯಸಿಸಲು ಬಯಸುವೆ. " ಎಂದು ಆಕೆ ಹೇಳುತ್ತಿದ್ದಳು. ಅದಕ್ಕಾಗಿಯೆ ಅವಳು ಅಂಬೋಸೆಲಿ ಆನೆಗಳ ಸಂಶೋಧನೆ ಯೋಜನೆವನ್ನು ಪ್ರಾರಂಭಿಸಿದಳು.
ಅವಳಿಗೆ ತನ್ನ ಇಡೀ ಆಯುಷ್ಯವನ್ನೇ ಇದಕ್ಕಾಗಿ ಮುಡುಪಿಡಬೇಕಾಗುವದು ಎಂಬುದರ ಅರಿವು ಆಗ ಇರಲಿಲ್ಲ. ಅವಳಿಗೆ ಕೇವಲ ಅವುಗಳನ್ನು ಅಭ್ಯಸಿಸಬೇಕು ಎಂಬುದಷ್ಟೇ ಆಗ ಗೊತ್ತಿತ್ತು. ಮಳೆಗಾಲದಲ್ಲಿಯ ಹಚ್ಚು ಹಸುರಿನ ಹುಲ್ಲಿನಲ್ಲಿ ವಾಸಿಸುವ ಆನೆಗಳ ಕುಟುಂಬಗಳ ಬಗ್ಗೆ, ಈ ಕುಟುಂಬಗಳ ಹಿಂಡುಗಳ ಬಗ್ಗೆ ತಿಳಿದುಕೊಳ್ಳಲು ಅವಳಿಗೆ ತವಕವಿತ್ತು. ಇದಷ್ಟೇ ಅಲ್ಲ, ಮಳೆ ಕಡಿಮೆ ಬಿದ್ದಾಗ ಮತ್ತು ರಣ ರಣ ಬಿಸಿಲುಗಾಲದಲ್ಲಿ ಅವು ಹೇಗೆ ಜೀವಿಸುತ್ತವೆ ಎಂಬುದನ್ನು ತಿಳಿದುಕೊಳ್ಳುವ ಬಯಕೆ ಇತ್ತು.






ಇದಕ್ಕಾಗಿ ಮೊದಲಿನಂತೆಯೇ ಅವಳು ಛಾಯಾಚಿತ್ರಗಳನ್ನು ತೆಗೆಯುವದರಿಂದ ಪ್ರಾರಂಭಿಸಿದಳು.

“ನಾನು ಸಾವಿರಾರು ಛಾಯಾಚಿತ್ರಗಳನ್ನು ತೆಗೆಯುತ್ತೇನೆ. ಮ್ಯಾಗ್ನಿಫಾಯಿಂಗ ಗ್ಲಾಸಿನ ಕೆಳಗಿಟ್ಟು ಅವುಗಳ ಕಿವಿಗಳನ್ನು ಸೂಕ್ಷ್ಮವಾಗಿ ಅಭ್ಯಸಿಸುತ್ತೇನೆ.” ಎಂದು ಸಿಂಥಿಯಾ ಹೇಳುತ್ತಿದ್ದಳು. ಅವಳು ಮನುಷ್ಯರನ್ನು ಗುರುತಿಸಲು ಹೆಸರು ಕೊಟ್ಟಂತೆ ಕಾಡಾನೆಗಳಿಗೂ ಮನುಷ್ಯರ ಹೆಸರನ್ನೇ ಕೊಡತೊಡಗಿದಳುಃ ಆಡಮ್, ಅಗಾಥಾ, ಅಲ್ಬರ್ಟ್, ಅಲೈಸ್, ಎಮೀ, ಅನಾಬೆಲೆ... ಕೆಲ ಸಲ ಹೆಸರು ಥಕ್ಕನೆ ತೋಚದಿದ್ದಾಗ ವಾರ್ಟಇಅರ ಎಂದೇ ಮನಸ್ಸಿಗೆ ಆ ಕ್ಷಣ ಹೊಳೆದಂತೆ ಹೆಸರಿಟ್ಟಳು.

ಕೊನೆಯಲ್ಲಿ ಒಂದು ಆನೆಯನ್ನು ಕಂಡಾಗ ಅದರ ತಾಯಿ-ತಂದೆಗಳು, ಅಣ್ಣ-ತಮ್ಮಂದಿರು, ಅಕ್ಕ-ತಂಗಿಯರು, ಚಿಗಪ್ಪ-ಚಿಗಮ್ಮ, ಅಜ್ಜಿ-ಮುತ್ತಜ್ಜಿ ಮುಂತಾದ ನೆಂಟರು ಯಾರು ಯಾರು ಎಂಬುದನ್ನು ಗುರುತಿಸತೊಡಗಿದಳು. ಇದು ನಿಜವಾಗಿ ನೋಡಿದರೆ ಬಹು ದೊಡ್ಡ ಕೆಲಸ. ಆದರೆ ಸಿಂಥಿಯಾಗೆ ಇವುಗಳ ಅಳುಕು ಇರಲಿಲ್ಲ.

ಈ ನಡುವೆ ಸಿಂಥಿಯಾ ಅಂಬೋಸೆಲಿ ರಾಷ್ಟ್ರೀಯ ಉದ್ಯಾನವನ್ನು ನಿರ್ಮಿಸಿದಳು. ಆ ಉದ್ಯಾನದಲ್ಲಿಯೇ ಅವಳು ಕಟ್ಟಿದ ಹುಲ್ಲಿನ ಗುಡಾರದ ಕಿಂಡಿಗಳಿಂದ ಅಫ್ರಿಕೆಯಲ್ಲಿಯೇ ಅತೀ ಎತ್ತರದ ಕಿಲಿಮಂಜಾರೊ ಪರ್ವತದ ಶಿಖರ ಅವಳಿಗೆ ಕಾಣುತ್ತಿತ್ತು.





ಸಿಂಥಿಯಾ ದಿನಬೆಳಗಾದ ಕೂಡಲೆ ತನ್ನ ಲ್ಯಾಂಡ್ ರೋವ್ವರ್ ಜೀಪನ್ನು ಉದ್ಯಾನದಲ್ಲಿ ಚಲಾಯಿಸುತ್ತ ಮರಿ ಆನೆಗಳ ಸೊಂಡೆಗಳಿಂದ ಹೊರಬೀಳುವ ಚೀತ್ಕಾರ ಮತ್ತು ಅವುಗಳ ರಾಡಿಯಲ್ಲಿಯ ಚೆಲ್ಲಾಟ ನೋಡಲು ಹೊರಬೀಳುತ್ತಿದ್ದಳು.
ಅವುಗಳ ತಾಯಂದಿರು ದೂರದಲ್ಲಿ ನಿಂತು ಹಸಿದ ಸಿಂಹಗಳಿಂದ ಮತ್ತು ತೋಳಗಳಿಂದ ತಮ್ಮ ಮರಿಗಳ ರಕ್ಷಣೆ ಮಾಡುವದನ್ನು ನೋಡುತ್ತಿದ್ದಳು. ಆನೆಗಳು ಅಗಲಿ ಹೋದರೂ ಮತ್ತೇ ತಮ್ಮ ತಮ್ಮ ಹಿಂಡುಗಳಿಗೆ ತಾವಾಗಿಯೇ ತಿರುಗಿ ಬರುತ್ತಿದ್ದವು. ಆಗ ಅವುಗಳ ಪ್ರೀತಿ ಉಕ್ಕಿ ಬರುತ್ತಿತ್ತು. ಅದನ್ನು ಮೈತಿಕ್ಕುತ್ತ, ಸೊಂಡೆಗಳನ್ನು ಸಿಕ್ಕಿಸುತ್ತ, ಹಸ್ತಿದಂತಗಳ ಸಪ್ಪಳ ಮಾಡುತ್ತ, ಕೇಕೇ ಹಾಕುತ್ತ ತಮ್ಮ ಸಂತಸವನ್ನು ವ್ಯಕ್ತಗೊಳಿಸುತ್ತಿದ್ದವು.

ಆನೆಗಳು ಮಾತೃಪ್ರಧಾನ ಕುಟುಂಬದ ಸದಸ್ಯರೆಂಬುದು ಅವಳಿಗೆ ತಿಳಿದು ಬಂದಿತು. ಈ ಆನೆಗಳ ಮುದಿ ಅಜ್ಜಿಗಳು ಒಳ್ಳೆಯ ಆಹಾರ ಎಲ್ಲಿ ದೊರೆಯುತ್ತವೆ, ಮಳೆ ಬೀಳದಿದ್ದಾಗ ಬಿಸಿಲು ಕಾಲದಲ್ಲಿ ನೀರು ಎಲ್ಲಿ ದೊರೆಯುತ್ತವೆ ಎಂಬುದನ್ನು ನೆನಪಿನಲ್ಲಿಟ್ಟು ಹಿಂಡನ್ನು ಆ ಜಾಗಕ್ಕೆ ಕರೆದುಕೊಂಡು ಹೋಗುತ್ತಿದ್ದವು. ಆ ಮುದಿ ಆನೆಗಳಲ್ಲಿ ಅಂಕು-ಡೊಂಕಾದ ಸೊಂಡಿಲು ಇರುವ 'ಎಕೋ' ಎನ್ನುವ ಅಜ್ಜಿಯನ್ನು ಸಿಂಥಿಯಾ ಸಾಕಷ್ಟು ಪ್ರೀತಿಸುತ್ತಿದ್ದಳು. ಸಿಂಥಿಯಾ ಲ್ಯಾಂಡ್ ರೋವ್ವರ್ ದಲ್ಲಿ ಕುಳಿತುಕೊಳ್ಳಲೆಂದು ಹೊರಟಾಗ ಎಕೋ ಮೆಲ್ಲಮೆಲ್ಲಗೆ ಜೀಪಿನ ತೀರ ಹತ್ತಿರ ಬಂದು ಅವಳಿಗೆ ಹೆಲ್ಲೋ ಅನ್ನುತ್ತಿರುವಂತೆ ಮೈ ತಿಕ್ಕುತ್ತಿತ್ತು. ಇಂತಹ ಪ್ರಸಂಗಗಳಿಂದ ಸಿಂಥಿಯಾ ಆನೆಗಳ ಸ್ವಭಾವದ ಪರಿಚಯವಾಗತೊಡಗಿತು. "ಅವು ನಮ್ಮ ಒಲವಿನ ಗೆಳೆಯರಂತೆಯೇ ವರ್ತಿಸುವವು." ಸಿಂಥಿಯಾ ಹೇಳುತ್ತಿದ್ದಳು. "ಅವು ಉಳಿದವರ ನೆರವಿಗೆ ಬರುವವು, ಕಾಳಜಿ ತೆಗೆದುಕೊಳ್ಳುವವು, ತಮ್ಮ ತಮ್ಮೊಳಗೆ ಸಹಕರಿಸುವವು."



ಆದರೆ ಎಷ್ಟೋ ಜನ ಸಿಂಥಿಯಾನಂತೆ ಆನೆಗಳನ್ನು ಪ್ರೀತಿಸಲಾರರು. ಹತ್ತು ವರುಷಗಳಲ್ಲಿ ಆಫ್ರಿಕೆಯಲ್ಲಿಯ ಅರ್ಧಕ್ಕಿಂತ ಹೆಚ್ಚು ಆನೆಗಳು ಕೊಲ್ಲಲ್ಪಟ್ಟಿವೆ. ಇಡೀ ಜಗತ್ತಿನಲ್ಲಿಯೇ ಪ್ರತಿ ಹತ್ತು ನಿಮಿಷಕ್ಕೆ ಒಂದರಂತೆ ಆನೆಗಳು ನಶಿಸುತ್ತಲಿವೆ. ಮುಗಿಲಿನ ಕೆಳಗೆ ಹಸಿರು ಹುಲ್ಲಿಗಾಡಿನಲ್ಲಿಯ ಆನೆಯ ಹಿಂಡುಗಳ ಅಲೆದಾಟ, ಅವುಗಳ ಬಡ್ಡಿಯವರೆಗಿನ ಹುಲ್ಲನ್ನು ಕಿತ್ತಿ ತಿನ್ನುವ ಬಗೆ ಮತ್ತು ಡೊಂಕಾದ ಸೊಂಡಿಲಿನಿಂದ ಹೊರಬರುವ ಚೀತ್ಕಾರ ಇವುಗಳನ್ನು ಕಣ್ಮುಂದೆ ತನ್ನಿ. ಇದಾದ ಮೇಲೆ ಅದೇ ಬಯಲಲ್ಲಿ ನಿಶ್ಚೇಷ್ಟಿತವಾಗಿ ಬಿದ್ದಿರುವ, ಆದರೆ ಅದರ ಹಲ್ಲುಗಳನ್ನೇ ಕಿತ್ತಿಕೊಂಡು ಹೋದ ದೃಶ್ಯವನ್ನು ಕೂಡ ಕಲ್ಪಿಸಿ. ಈ ಹಸ್ತಿದಂತಗಳ ಕಳ್ಳ ವ್ಯಾಪಾರದಿಂದ ಹಣ ಗಳಿಸುವವರ ಮತ್ತು ಅವುಗಳನ್ನು ಕಳ್ಳಸಂತೆಯಲ್ಲಿ ದುಬಾರಿ ದುಡ್ಡು ಕೊಟ್ಟು ಖರೇದಿ ಮಾಡಿ ಪಿಯಾನೋ ವಾದ್ಯಕ್ಕಾಗಿ, ಆಭರಣಗಳಿಗಾಗಿ ಉಪಯೋಗಿಸುವವರ ಸಂಖ್ಯೆ ಕೂಡ ಕಡಿಮೆ ಇಲ್ಲ.

ವಯಸ್ಸಾದ ಮುದಿ ಆನೆಗಳನ್ನು ಅವುಗಳ ಹಲ್ಲಿಗಾಗಿ ಕೊಂದು ಮಾಯಮಾಡಿದಾಗ ಅವುಗಳ ಮರಿಗಳು ಮತ್ತು ಇತರ ಆನೆಗಳ ಸ್ಥಿತಿ ಏನಾಗುವದು ಎಂಬುದನ್ನು ಸಿಂಥಿಯಾ ಕಣ್ಣಾರೆ ಕಾಣುತ್ತಿದ್ದಳು. ಆ ಮರಿಗಳ ತಂದೆ-ತಾಯಿ ಯಾರು ಆಗಬೇಕು? ಅವುಗಳ ರಕ್ಷಣೆ ಯಾರು ಮಾಡಬೇಕು? ಅವುಗಳಿಗೆ ಹುಲ್ಲಿರುವ ಮತ್ತು ನೀರಿರುವ ತಾಣಗಳನ್ನು ಯಾರು ತೋರಿಸಬೇಕು?



ಸಿಂಥಿಯಾ ಈ ಹಸ್ತಿದಂತಗಳ ಬಗ್ಗೆ ಚರ್ಚಿಸತೊಡಗಿದಳು. ಹಸ್ತಿದಂತಗಳು ಬಹಳ ಅಂದದ, ಕೆತ್ತನೆ ಕೆಲಸ ಮಾಡಿದಾಗ ಝುಗಝಿಸುವ ಅಪರೂಪದ ವಸ್ತುಗಳು. ಆದರೆ ಜನ ಈ ಹಸ್ತಿದಂತಗಳು ಜೀವಂತವಿದ್ದ ಪ್ರಾಣಿಯ ಪಲ್ಲುಗಳು. ಅದನ್ನೇ ಈ ಕದ್ದು ಬೇಟೆಯಾಡುವವರು ಮರೆಯುತ್ತಾರೆ. ಈ ಆಸೆಬುರುಕ ಬೇಟೆಗಾರರು ಆ ಹಲ್ಲಿಗಾಗಿ ಕೊಂದು ಬಿಡುತ್ತಾರೆ. ಸಿಂಥಿಯಾ ಹೇಳುತ್ತಿದ್ದಳು. ಇಡೀ ಜಗತ್ತಿನ ತುಂಬ ಹಬ್ಬಿದ ಈ ಕಳ್ಳ ವ್ಯವಹಾರದ ವಿರುದ್ಧ ಹೋರಾಡುವ ಗುಂಪನ್ನು ಅವಳು ಸೇರಿದಳು. ಇದು ಅವಳಿಗಾಗಿ ಚಲೆಂಜ್ ಸರಿ ಇತ್ತು. ಆದರೆ ಸಿಂಥಿಯಾ ಹಿಂಜರಿಯುವ ಮಹಿಳೆಯಲ್ಲ.



1990ರ ಜಾನೇವಾರಿ ತಿಂಗಳಲ್ಲಿ ಹಸ್ತಿದಂತಗಳ ಮಾರಾಟ ಮಾಡಕೂಡದು ಎಂದು ಜಾಗತಿಕ ಕಟ್ಟಳೆ ಮಾಡಲ್ಪಟ್ಟಿತು. ಆದರೆ ಎಲ್ಲ ದೇಶಗಳು ಇದಕ್ಕೆ ಒಪ್ಪಲಿಲ್ಲ. ಹೀಗಾಗಿ ಈ ಹಲ್ಲುಗಳ ಮಾರಾಟ ಮುಂದುವರೆಯಿತು. ಎಷ್ಟೋ ಸಿರಿವಂತರಿಗೆ ಈ ಹಸ್ತಿದಂತಗಳು ಬೇಕಿದ್ದರಿಂದ ಅದಕ್ಕಾಗಿ ಆಫ್ರಿಕನ್ ಆನೆಗಳ ಕೊಲೆ ಮಾಡುವದು ನಿಲ್ಲಲಿಲ್ಲ. ಸಿಂಥಿಯಾ ಇದರ ವಿರೋಧದಲ್ಲಿ ದನಿ ಎಬ್ಬಿಸುತ್ತಿದ್ದಳು.

ಸಿಂಥಿಯಾ ಅಂಬೋಸೆಲಿ ಆನೆಗಳ ಸಂಶೋಧನ ಯೋಜನೆದ ಮೇಲೆ 40 ವರುಷ ಹಗಲು-ಇರುಳು ಕೆಲಸ ಮಾಡಿದಳು. ಚಿಕ್ಕಂದಿನಲ್ಲಿ ಕುದುರೆಯನ್ನು ಪ್ರೀತಿಸುವ ಸಿಂಥಿಯಾ ತಾನು ಅಂಬೋಸೆಲಿಯ ಕಾಡಾನೆಗಳ ಕುಟುಂಬಗಳಿಗಾಗಿ ಇಡೀ ಆಯುಷ್ಯವನ್ನೇ ಕೊಡಬಹುದು ಎಂದು ಕನಸಿನಲ್ಲಿಯೂ ಕಂಡಿರಲಿಲ್ಲ. 2500ಕ್ಕೂ ಹೆಚ್ಚು ಆನೆಗಳ ಅಭ್ಯಾಸ ಅವಳು ಮಾಡಿರಬಹುದು. ಅವುಗಳ ಹುಟ್ಟು-ಸಾವುಗಳನ್ನು ಕಂಡಿರಬಹುದು. 2009ರಲ್ಲಿ ಆಕೆಯ ಪ್ರೀತಿಯ ಎಕೋನ ಮೃತ್ಯು ಕೂಡ ಅವಳು ನೋಡಿದಳು.

ಈಗೀಗ ಅವಳು ತನ್ನ ಹೆಚ್ಚು ವೇಳೆಯನ್ನು ಭಾಷಣಗಳನ್ನು ಕೊಡುವದರಲ್ಲಿ, ಆನೆಗಳಿಗಾಗಿ ವಂತಿಗೆ ಶೇಖರಿಸುವದರಲ್ಲಿ ಕಳೆಯುತ್ತಿದ್ದರೂ ಆನೆಗಳ ಅಭ್ಯಾಸವನ್ನು ಮತ್ತು ಅವುಗಳ ಕತೆಗಳ ಬಗ್ಗೆ ಚಿಕ್ಕಮಕ್ಕಳು ಮತ್ತು ತರುಣ-ತರುಣಿಯರಲ್ಲಿ ಜೇಳುವದಕ್ಕಾಗಿ ಭಾಷಣ ಕೊಡುವದನ್ನು ಇಲ್ಲವೆ ಚಿತ್ರಪಟಗಳ ಮುಖಾಂತರ ಹೇಳುವದನ್ನು ನಿಲ್ಲಿಸಿಲ್ಲ. ಸಿಂಥಿಯಾ ಮಾಡಿದಷ್ಟು ಎಕೋ ಮತ್ತು ಎಕೋನ ಮಕ್ಕಳ ಬಗ್ಗೆ ಮತ್ತು ಇನ್ನುಳಿದ ಆಂಬೋಸೆಲಿಯಲ್ಲಿಯ ಆನೆಗಳ ಬಗ್ಗೆ ಇಷ್ಟೊಂದು ದೊಡ್ಡ ಅಭ್ಯಾಸ ಯಾರೂ ಮಾಡಿರಲಾರರು.



ಇದು ಒಂದು ಪ್ರಚಂಡ ಕಾರ್ಯ.
ಆದರೆ ಸಿಂಥಿಯಾ ಮೋಸ್
ಪ್ರಚಂಡವಾದ ಕಾರ್ಯ ಮಾಡಲು
ಹಿಂಜರಿಯವವಳಲ್ಲ.



ಸಿಂಥಿಯಾ ಮೋಸ್ ಳ ಜನ್ಮ 1940ರಲ್ಲಿ ಆಯಿತು. ಕೆನಿಯಾದಲ್ಲಿ ಅಂಬೋಸೆಲಿ ರಾಷ್ಟ್ರೀಯ ಉದ್ಯಾನದಲ್ಲಿ 40 ವರುಷಗಳ ಕಾಲ ಆನೆಗಳ ಅಭ್ಯಾಸದಲ್ಲಿ ಕಳೆದಳು. ವ್ಹರ್ಜಿನಿಯಾದಲ್ಲಿಯ ಸದರ್ನ ಸೆಮಿನರಿಯಲ್ಲಿ ಪದವಿವರೆಗೆ ತತ್ವಜ್ಞಾನ ವಿಷಯ ಕಲಿಯುತ್ತಿದ್ದಳು. ಪದವಿ ಪಡೆದ ನಂತರ 1962ರಲ್ಲಿ ಅವಳು ನ್ಯೂಜವೀಕ ಎಂಬ ಪತ್ರಿಕೆಗಾಗಿ ಸುದ್ದಿಗಾರಳೆಂದು ಮತ್ತು ಸಂಶೋಧಕಳೆಂದು ಕೆಲಸ ಮಾಡತೊಡಗಿದಳು. ಆಪ್ರಿಕೆಯಲ್ಲಿಯ ಅವಳ ಗೆಳತಿ, ಪೆನಿ ನೇಲೊರಳ ವಿವರವಾದ ಪತ್ರಗಳು ಬರದೆ ಇದ್ದರೆ ತಾನೇ ಒಬ್ಬಳೇಅವಳು ಆಫ್ರಿಕಾಕ್ಕೆ ಹೋಗುವ ಸಾಹಸ ಮಾಡುತ್ತಿರಲಿಲ್ಲ. 1967ರಲ್ಲಿ ಅವಳು ಆಫ್ರಕೆಯ ಭೂಮಿಯ ಮೇಲೆ ಕಾಲಿಟ್ಟಳು. ಕಾಲಿಟ್ಟ ಕ್ಷಣದಿಂದಲೇ ಅವಳಿಗೆ ಈ ಖಂಡವು ಸೇರತೊಡಗಿತು. ಅದರ ಪ್ರೇಮದಲ್ಲಿಯೇ ಬಿದ್ದಳು. ಅಷ್ಟರಲ್ಲಿ ಕ್ಯಾರೋಲಿನ್ ಎಂಬ ಅಕ್ಕನನ್ನು ಬಿಟ್ಟರೆ ಅಮೇರಿಕೆಯಲ್ಲಿ ಯಾವ ಸಂಬಂಧಿಕರಿರಲಿಲ್ಲ.ಹೀಗಾಗಿ ಅವಳು ಅಆಫ್ರಿಕಾದಲ್ಲಿಯೇ ಕಾಯಮ ಆಗಿ ಇರತೊಡಗಿದಳು.

ಸಿಂಥಿಯಾಗೆ ಅಕಸ್ಮಾತ್ತಾಗಿ ಆಯಾನ್ ಡೋಗ್ಲಾಸ್ ಹ್ಯಾಮಿಲ್ಟನ್ ಎಂಬ ಸ್ಕಾಟಿಶ್ ಪ್ರಾಣಿಶಾತ್ರಜ್ಞನ ಭೇಟಿಯಾಯಿತು. ಅವರು ಟಾಂಝಾನಿಯಾದಲ್ಲಿಯ ಮನ್ಯಾರಾ ರಾಷ್ಟ್ರೀಯ ಉದ್ಯಾನದಲ್ಲಿ ಆನೆಗಳ ಸಾಮಾಜಿಕ ವರ್ತನೆಗಳ ಬಗ್ಗೆ ಅಭ್ಯಾಸ ಮಾಡುತ್ತಿದ್ದರು. ಉದ್ಯಾನದಲ್ಲಿಯ 400 ಆನೆಗಳನ್ನು ಒಂದೊಂದಾಗಿ ಗುರುತಿಸಲು ಅವುಗಳ ಛಾಯಾಚಿತ್ರಗಳನ್ನು ತೆಗೆಯಬೇಕಾಗಿತ್ತು. ಈ ಕೆಲಸವನ್ನು ಅವರು ಸಿಂಥಿಯಾಗೆ ಕೊಟ್ಟರು. ಈ ಕೆಲಸ ಮುಗಿದ ಮೇಲೆ ಸಿಂಥಿಯಾಗೆ ತನ್ನದೇ ಆದ ಒಂದು ಯೋಜನೆದಲ್ಲಿ ಕೆಲಸ ಮಾಡಬೇಕೆಂದೆನ್ನಿಸತೊಡಗಿತು. 1972ರಲ್ಲಿ ಹಾರ್ವಿ ಕ್ರೊಸ್ ಎಂಬ ಸಂಗಡಿಗನ ಜೊತೆಗೂಡಿ ಅವಳು ದಕ್ಷಿಣ ಕೆನಿಯಾದಲ್ಲಿ 150 ಚದುರು ಮೈಲು ವಿಸ್ತೀರ್ಣವಿರುವ ಸಂರಕ್ಷಿತ ಅಂಬೋಸೆಲಿ ರಾಷ್ಟ್ರೀಯ ಉದ್ಯಾನದಲ್ಲಿ ಅಂಬೋಸೆಲಿ ಆನೆ ಸಂಶೋಧನೆಯ ಯೋಜನೆಯಲ್ಲಿ ಕೆಲಸ ಮಾಡತೊಡಗಿದಳು. 1974ರಲ್ಲಿ ಕ್ರೊಸ್ ಬಿಟ್ಟು ಹೋದ ಮೇಲೆಯು ಕೂಡ ಅವಳು ಆನೆಗಳ ಜೊತೆ ಆಫ್ರಿಕೆಯಲ್ಲಿಯೇ ಇದ್ದು ಬಿಟ್ಟಳು.

ಸಿಂಥಿಯಾಳ ಆನೆಗಳ ಮೇಲಿನ ಪ್ರೀತಿ ಎಂದೂ ಬತ್ತಲಿಲ್ಲ. ಅವಳು ಎಂದೂ ಬೇಜಾರಾಗಲಿಲ್ಲ. ಎಂದೂ ಅಸಡ್ಡೆ ಮಾಡಲಿಲ್ಲ. ತಾಳ್ಮೆ ಕಳೆದುಕೊಳ್ಳಲಿಲ್ಲ. ಹೀಗಾಗಿ ಅವಳು ಆನೆಗಳ ಜೀವನದ ಬಗ್ಗೆ ಅವುಗಳ ಸಾಮಾಜಿಕ, ಕೌಟುಂಬಿಕ ನಡುವಳಿಕೆಗಳ ಬಗೆಗಿನ ಎಷ್ಟೋ ಪ್ರಶ್ನೆಗಳ ಬಗ್ಗೆ ಹೊಸ ಹೊಸ ಉತ್ತರಗಳನ್ನು ಪಡೆದಳು. ಅವಳು ಆನೆಗಳ ಬಗ್ಗೆ ಜಗತ್ತಿನ ಯಾವದೇ ಮೂಲೆಗೆ ಹೋದರೂ ಅಲ್ಲಿ – ಸಂದರ್ಶನಗಳಲ್ಲಿ, ವಂತಿಗೆ ಕೇಳಲು ಹೋದಾಗ - ಬಹಳ ಪ್ರೀತಿಯಿಂದ ಮಾತನ್ನಾಡುತ್ತಿದ್ದಳು. ನಾಲ್ಕು ದಶಕಗಳವರೆಗೆ ಅವು ಅವಳ ಪ್ರಾಣವಾಗಿದ್ದವು.



ಎಷ್ಟೋ ಸಂಶೋಧಕರು ಆಫ್ರಿಕೆಯಲ್ಲಿಯ ಆನೆಗಳ ಬಗ್ಗೆ ಅಭ್ಯಾಸ ಮಾಡುತ್ತಲಿದ್ದಾರೆ. ಸಿಂಥಿಯಾಳಿಗೆ ಆನೆಗಳ ಬಗ್ಗೆ ಪ್ರೇರೇಪಿಸಿದ ಡಾಃ ಇಯಾನ್ ಡೋಗ್ಲಾಸ್ ಹ್ಯಾಮಿಲ್ಟನ್ ಇವರು ಜಗತ್ತಿನಲ್ಲಿಯೇ ಈ ವಿಷಯದ ಜಗತ್ಪ್ರಸಿದ್ಧ ತಜ್ಞರು. ಆನೆಗಳ ಅಲೆದಾಟದ ಅಭ್ಯಾಸ ಮಾಡಿ ಅವುಗಳ ಜೀವನ ಪದ್ಧತಿಯನ್ನು ಅವರು ಕಂಡುಹಿಡಿದರು. 1989ರಲ್ಲಿ ಹಸ್ತಿದಂತಗಳ ಕಳ್ಳ ಮಾರಾಟದ ಕಟ್ಟಪ್ಪಣೆಗಾಗಿ ಪ್ರಯತ್ನಿಸಿದವರಲ್ಲಿ ಅವರು ಮುಖ್ಯರು. ಸೇವ್ದ ದಿ ಎಲಿಫಂಟ್ಸ (www savetheelephants.org) ಎಂಬ ಸಂಸ್ಥೆಯನ್ನು ಅವರು ಸ್ಥಾಪಿಸಿದರು. ಈ ಸಂಸ್ಥೇ ಆನೆಗಳ ಮೇಲಿನ ಸಂಶೋಧನೇ, ಅವುಗಳ ರಕ್ಷಣೆ, ಜನರಲ್ಲಿ ತಿಳಿವಳಿಕೆ ಮೂಡಿಸುವದು ಮತ್ತು ಸಂವಾದ ಮುಂತಾದವುಗಳನ್ನು ಮಾಡುತ್ತದೆ.

ಜಾಯಸ್ ಪೂಲ್ ಎಂಬ ಇನ್ನೊಬ್ಬ ಸಂಶೋಧಕಳು ಸಿಂಥಿಯಾ ಜೊತೆ ಆಂಬೋಸೆಲಿಯಲ್ಲಿ ಸಂಶೋಧನೆ ಮಾಡಿದಳು. ಸಿಂಥಿಯಾಳ ಕೈಕೆಳಗೆ ಪಳಗಿದಳು.ಈ 30 ವರುಷಗಳಲ್ಲಿ ಆನೆಗಳು ಹೇಗೆ ಸಂವಾದಿಸುತ್ತವೆ ಎಂಬ ವಿಷಯದ ಮೇಲೆ ಅವಳು ಸಂಶೋಧಿಸಿದಳು. ಅವಳು ಮತ್ತು ಅವಳ ಪತಿ, ಪೀಟರ್ ಗೀಯಾಮ್ಲಿ ಕೂಡಿ ಪೂರ್ವ ಆಫ್ರಿಕೆಯಲ್ಲಿಯ ಮಸಾಈ ಮಾರಾದಲ್ಲಿ ಆನೆಗಳ ಸಂರಕ್ಷಣೆ ಮತ್ತು ಸಂತತಿ ಬೆಳೆಯುವದರ ಬಗ್ಗೆ ಕೆಲಸ ಮಾಡುವ ಸಂಸ್ಥೆಯನ್ನು ಸ್ಥಾಪಿಸಿದರು.

